ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 780 (649)
ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಅಲ್ಲಂ ವೀರಭದ್ರಪ್ಪ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು
ಉತ್ತರಿಸುವ ದಿನಾಂಕ : 15.12.2020

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಈಗಾಗಲೇ ಕೈಗಾರಿಕಾ ನೀತಿ ಘೋಷಣೆ ಹಂತದಲ್ಲಿದ್ದು ಕರ್ನಾಟಕದಲ್ಲಿರುವ ಸ್ಟೀಲ್ ಕಾರ್ಖಾನೆಗಳಿಗೆ ಆಂಧ್ರ ಪ್ರದೇಶ ಮಾದರಿಯಲ್ಲಿ ಸಹಾಯ ಧನ (Subsidy) ನೀಡಲಾಗುತ್ತಿದೆಯೇ?</td><td>ರಾಜ್ಯದ ನೂತನ ಕೈಗಾರಿಕಾ ನೀತಿ 2020–25 ನ್ನು ದಿನಾಂಕ 13.08.2020 ರಂದು ಜಾರಿಗೆ ತರಲಾಗಿರುತ್ತದೆ.

• ರಾಜ್ಯದಲ್ಲಿ ಬೃಹತ್ ಮತ್ತು ಮೆಗಾ ಕೈಗಾರಿಕೆಗಳಿಗೆ ಈ ಕೆಳಕಂಡಂತೆ ರಿಯಾಯಿತಿಗಳನ್ನು ಕಲ್ಪಿಸಲಾಗಿದೆ.
<table>
<tr><th>ವಲಯ</th><th>ಮುದ್ರಾಂಕ ಶುಲ್ಕ</th><th>ಭೂ ಪರಿವರ್ತನೆ</th><th>ಇ.ಟಿ.ಪಿ. ಸಹಾಯಧನ</th><th>ಆ್ಯಂಕರ್ ಸಹಾಯಧನ</th></tr>
<tr><td>ವಲಯ–1</td><td>ಶೇ.100</td><td>ಶೇ.100</td><td rowspan="3">ಘಟಕದ ವೆಚ್ಚ ಒಂದು ಬಾರಿ ಗರಿಷ್ಠ ಮಿತಿ ರೂ.2.50 ಕೋಟಿ (ಎಲ್ಲಾ ವಲಯಕ್ಕೂ)</td><td>ರೂ.10 ಕೋಟಿ</td></tr>
<tr><td>ವಲಯ–2</td><td>ಶೇ.75</td><td>ಶೇ.100</td><td>ರೂ.7 ಕೋಟಿ</td></tr>
<tr><td>ವಲಯ–3</td><td>–</td><td>–</td><td></td></tr>
</table>

• ಅಲ್ಲದೆ ರಾಜ್ಯದಲ್ಲಿ ಬೃಹತ್, ಮೆಗಾ, ಅಲ್ಟ್ರಾ ಮೆಗಾ ಹಾಗೂ ಸೂಪರ್ ಮೆಗಾ ಕೈಗಾರಿಕೆಗಳಿಗೆ ವಹಿವಾಟು ಆಧರಿಸಿ ಹೂಡಿಕೆ ಉತ್ತೇಜನಾ ಸಹಾಯಧನವನ್ನು ಕಲ್ಪಿಸಲಾಗಿದೆ (ವಿವರಗಳನ್ನು ಅನುಬಂಧ–1ರಲ್ಲಿ ಒದಗಿಸಿದೆ).
• ಸೂಪರ್ ಮೆಗಾ ಕೈಗಾರಿಕೆಗಳು ರೂ. 1000 ಕೋಟಿಗಿಂತ ಹೆಚ್ಚಿನ ಬಂಡವಾಳ ಹೂಡಿದ್ದಲ್ಲಿ, ವಿಶೇಷ ರಿಯಾಯಿತಿ ಹಾಗೂ ಪ್ರೋತ್ಸಾಹಗಳನ್ನು ಮಂಜೂರು ಮಾಡಲು ಅವಕಾಶವಿರುತ್ತದೆ.</td></tr>
</table>

ಸಿಐ 349 ಎಸ್‌ಪಿಐ 2020

(ಜಗದೀಶ್ ಶೆಟ್ಟರ್)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ
ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು

ಅನುಬಂಧ-4

ಬೃಹತ್, ಮೆಗಾ, ಅಲ್ಟ್ರಾಮೆಗಾ ಹಾಗೂ ಸೂಪರ್ ಮೆಗಾ ಕೈಗಾರಿಕೆಗಳಿಗೆ ವಹಿವಾಟು ಆಧರಿಸಿ ಹೂಡಿಕೆ ಉತ್ತೇಜನಾ ಸಹಾಯಧನ

ಸ್ಥಿರಾಸ್ತಿಮೇಲೆ ಹೂಡಿಕೆ ವ್ಯಾಪ್ತಿ	ಹೂಡಿಕೆ ವ್ಯಾಪ್ತಿ ವಹಿವಾಟು ಆಧರಿಸಿ ಮರುಪಾವತಿ
ಬೃಹತ್ ಕೈಗಾರಿಕೆಗಳು : (ಅಂದರೆ ಮಧ್ಯಮ ಕೈಗಾರಿಕೆಗಳೆಂದು ವರ್ಗೀಕರಣಗೊಳ್ಳದ ಅದರೆ ಸ್ಥಿರಾಸ್ತಿ ಮೇಲೆ ರೂ.250 ಕೋಟಿ ವರೆಗೆ ಹೂಡಿಕೆ ಇರುವ ಕೈಗಾರಿಕೆಗಳು) ಮೊದಲ 50 ಕೋಟಿ ರೂ ಹೂಡಿಕೆಗೆ 50 ಮಂದಿಗೆ ನೇರ ಉದ್ಯೋಗ ಮತ್ತು ನಂತರದ ಪ್ರತೀ 50 ಕೋಟಿ ರೂಗಳಿಗೆ 35 ಮಂದಿಗೆ ಸೂಕ್ತ ಪ್ರಮಾಣಕ್ಕನುಗುಣವಾಗಿ ಉದ್ಯೋಗಾವಕಾಶ.	ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ವಹಿವಾಟು ಆಧರಿಸಿ ಹೂಡಿಕೆ ಉತ್ತೇಜನಾ ಸಹಾಯಧನ ಕೆಳಗಿನಂತಿದೆ.

ವಲಯ	ಶೇಕಡಾವಾರು ವಹಿವಾಟು	ಗರಿಷ್ಠ ಅವಧಿ	ವಿಎಫ್‌ಐ ಪರಿಮಿತಿ
1	2.25%	7	ವಿಎಫ್‌ಐ ನ 45 %
2		6	ವಿಎಫ್‌ಐ ನ 40 %
3	ಇಲ್ಲ		

ಸ್ಥಿರಾಸ್ತಿಮೇಲೆ ಹೂಡಿಕೆ ವ್ಯಾಪ್ತಿ	ಹೂಡಿಕೆ ವ್ಯಾಪ್ತಿ ವಹಿವಾಟು ಆಧರಿಸಿ ಮರುಪಾವತಿ
ಮೆಗಾ ಕೈಗಾರಿಕೆಗಳು : ರೂ.250 ಕೋಟಿಯಿಂದ ರೂ.500 ಕೋಟಿ ವರೆಗೆ ಸ್ಥಿರಾಸ್ತಿ ಮೇಲೆ ಹೂಡಿಕೆ ಮೊದಲ 250 ಕೋಟಿ ರೂ ಹೂಡಿಕೆಗೆ 200 ಮಂದಿಗೆ ನೇರ ಉದ್ಯೋಗ ಮತ್ತು ನಂತರದ ಪ್ರತೀ 50 ಕೋಟಿ ರೂ ಹೂಡಿಕೆಗೆ 35 ಮಂದಿಗೆ ಸೂಕ್ತ ಪ್ರಮಾಣಕ್ಕನುಗುಣವಾಗಿ ಉದ್ಯೋಗಾವಕಾಶ	ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ವಹಿವಾಟು ಆಧರಿಸಿ ಹೂಡಿಕೆ ಉತ್ತೇಜನಾ ಸಹಾಯಧನ ಕೆಳಗಿನಂತಿದೆ.

ವಲಯ	ಶೇಕಡಾವಾರು ವಹಿವಾಟು	ಗರಿಷ್ಠ ಅವಧಿ	ವಿಎಫ್‌ಐ ಪರಿಮಿತಿ
1	2.00%	8	ವಿಎಫ್‌ಐ ನ 50 %
2		7	ವಿಎಫ್‌ಐ ನ 45 %
3	ಇಲ್ಲ		

ಸ್ಥಿರಾಸ್ತಿಮೇಲೆ ಹೂಡಿಕೆ ವ್ಯಾಪ್ತಿ	ಹೂಡಿಕೆ ವ್ಯಾಪ್ತಿ ವಹಿವಾಟು ಆಧರಿಸಿ ಮರುಪಾವತಿ
ಅಲ್ಟ್ರಾಮೆಗಾ ಕೈಗಾರಿಕೆಗಳು : ಅಂದರೆ ಸ್ಥಿರಾಸ್ತಿ ಮೇಲೆ ರೂ.500 ಕೋಟಿಯಿಂದ ರೂ.1000 ಕೋಟಿ ವರೆಗೆ ಹೂಡಿಕೆ ಇರುವ ಕೈಗಾರಿಕೆಗಳು ಮೊದಲ 500 ಕೋಟಿ ರೂ ಹೂಡಿಕೆಗೆ ಕನಿಷ್ಠ 400 ಮಂದಿಗೆ ನೇರ ಉದ್ಯೋಗ ಮತ್ತು ನಂತರದ ಪ್ರತೀ 50 ಕೋಟಿ ರೂಗಳಿಗೆ 35 ಮಂದಿಗೆ ಸೂಕ್ತ ಪ್ರಮಾಣಕ್ಕನುಗುಣವಾಗಿ ಉದ್ಯೋಗಾವಕಾಶ.	ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ವಹಿವಾಟು ಆಧರಿಸಿ ಹೂಡಿಕೆ ಉತ್ತೇಜನಾ ಸಹಾಯಧನ ಕೆಳಗಿನಂತಿದೆ.

ವಲಯ	ಶೇಕಡಾವಾರು ವಹಿವಾಟು	ಗರಿಷ್ಠ ಅವಧಿ	ವಿಎಫ್‌ಐ ಪರಿಮಿತಿ
1	1.85%	9	ವಿಎಫ್‌ಐ ನ 55 %
2		8	ವಿಎಫ್‌ಐ ನ 50 %
3	ಇಲ್ಲ		

ಸ್ಥಿರಾಸ್ತಿಮೇಲೆ ಹೂಡಿಕೆ ವ್ಯಾಪ್ತಿ	ಹೂಡಿಕೆ ವ್ಯಾಪ್ತಿ ವಹಿವಾಟು ಆಧರಿಸಿ ಮರುಪಾವತಿ
ಸೂಪರ್ ಮೆಗಾ ಯೋಜನೆಗಳು: ಸ್ಥಿರಾಸ್ತಿ ಮೇಲೆ ರೂ.1000 ಕೋಟಿಗೂ ಮೇಲ್ಪಟ್ಟ ಯೋಜನೆಗಳು. ಮೊದಲ ರೂ.1000 ಕೋಟಿ ಹೂಡಿಕೆಗೆ ಕನಿಷ್ಠ 750 ಜನರಿಗೆ ನೇರ ಉದ್ಯೋಗ ನಂತರದ ಪ್ರತೀ 100 ಕೋಟಿ ರೂಗಳಿಗೆ 35 ಮಂದಿಗೆ ಸೂಕ್ತ ಪ್ರಮಾಣಕ್ಕನುಗುಣವಾಗಿ ಉದ್ಯೋಗಾವಕಾಶ.	ವಾಣಿಜ್ಯ ಉತ್ಪಾದನೆ ಆರಂಭಿಸಿದ ದಿನಾಂಕದಿಂದ ವಹಿವಾಟು ಆಧರಿಸಿ ಹೂಡಿಕೆ ಉತ್ತೇಜನಾ ಸಹಾಯಧನ ಕೆಳಗಿನಂತಿದೆ.

ವಲಯ	ಶೇಕಡಾವಾರು ವಹಿವಾಟು	ಗರಿಷ್ಠ ಅವಧಿ	ವಿಎಫ್‌ಐ ಪರಿಮಿತಿ
1	1.75%	10	ವಿಎಫ್‌ಐ ನ 60 %
2		9	ವಿಎಫ್‌ಐ ನ 55 %
3	ಇಲ್ಲ		